ಸಂದರ್ಭದಲ್ಲಿ ಮೆದುಳಿನ ಕ್ರಿಯೆ ಸ್ವಲ್ಪ ನಿಧಾನವಾಗುತ್ತೆ. ಆಗ ನಿಕೋಟಿನ್ ಒಳಗೆ ಹೋದರೆ, ರಕ್ತದ ಚಲನೆ ಹೆಚ್ಚಾಗಿ ಮಿದುಳು ಮತ್ತೆ ಚುರುಕಾಗುತ್ತೆ. ಸೋ... ಸಿಗರೇಟ್ ಈಸ್ ಎ ಮೆಡಿಸಿನ್... ಬಟ್ ಯೂಸ್ ಇಟ್ ಕೇರ್‌ಫುಲಿ" ಎನ್ನುತ್ತಾ ಕೈಗೆ ಸಿಗರೇಟು ಇಟ್ಟ ಸನ್ನಿವೇಶವನ್ನು ನೆನಸಿಕೊಂಡರು. ಸಿಗರೇಟ್ ಸೇದುವುದನ್ನಷ್ಟೇ ನೋಡಿದ್ದ ರಾಘವನ್ ಅದನ್ನು ಬಾಯಿಗೆ ಸಿಕ್ಕಿಸಿಕೊಳ್ಳಲು ಒದ್ದಾಡಿದಾಗ, ಷರೀಫರೇ ಅದನ್ನು ಅವರ ಬಾಯಿಗಿಟ್ಟು, ಬೆಂಕಿಕಡ್ಡಿ ಗೀರಿ, ''ಉಸಿರು ಒಳಗೆ ಎಳೆದುಕೋ" ಎಂದಿದ್ದರು. ಒಮ್ಮೆಗೆ ಹೊಗೆ ಗಂಟಲಿಗೆ ಅಡರಿ ಕೆಮ್ಮು ಬಂದಾಗ, "ಈಗ್ ಹೊಗೆ ದೀಕ್ಷೆ ಆಯಿತು ನೋಡು" ಎಂದು ಸ್ವಲ್ಪ ದೂರದಲ್ಲಿ ನಿಂತುಕೊಂಡು ಕೆಮ್ಮಿನಿಂದ ಒದ್ದಾಡಿ ಕಣ್ಣುಗಳ ತುಂಬಾ ನೀರು ತುಂಬಿಕೊಂಡ ರಾಘವನ್ ಕಡೆ ಚೇಷ್ಟೆಯ ನಗು ಬೀರಿದ್ದರು. ಮೂರನೇ ಬಾರಿಗೆ ಧಂ ಎಳೆದಾಗ, ತಲೆಯ ಭಾರ ಕಡಿಮೆ ಆದಂತೆ ಅನ್ನಿಸಿ ರಾಘವನ್‌ರಿಗೆ ಹಾಯ್ ಅನಿಸಿತು. ಇಪ್ಪತ್ತು ಫುಡ್ ಪಾಯಿಸನ್ ಕೇಸುಗಳನ್ನು ಹ್ಯಾಂಡಲ್ ಮಾಡಿ ಸುಸ್ತಾಗಿದ್ದ ಅವರಿಗೆ ಸ್ವಲ್ಪ ಶಕ್ತಿ ಬಂದಿತ್ತು. ಅದರಲ್ಲೂ ಮೂರು ರೋಗಿಗಳನ್ನು ಉಳಿಸಲಾಗದ ಬೇಸರ ಕಡಿಮೆಯಾಗಿತ್ತು.

"ರಾಘು, ಯಾವಾಗಲೂ ನೆನಪಿಡು. ಮನುಷ್ಯ ತಾನು ಉಳಿಯಲು ಏನು ಬೇಕಾದರೂ ಮಾಡುತ್ತಾನೆ. ಮತ್ತೊಬ್ಬರ ಜೀವ ತೆಗೆದಾದರೂ ಸರಿಯೇ ತಾನು ಉಳಿಯಬೇಕೆಂಬ ಸಹಜ ಪ್ರವೃತ್ತಿ ಅವನಲ್ಲಿರುತ್ತೆ. ಮ್ಯಾನ್ ಈಸ್ ಬೇಸಿಕಲಿ ಈವಿಲ್. ಅವನ ದೇವರು ಕೂಡ ಅಷ್ಟೇ. ಅವನ ಮಿತಿಯೊಳಗೇ ಇರುತ್ತಾನೆ. ಇದರಿಂದ ನಮ್ಮಂತಹ ವೈದ್ಯರಿಗೆ ಕಷ್ಟ ಜಾಸ್ತಿ. ನಮ್ಮನ್ನ ಹೋಗೋ ಜೀವ ಉಳಿಸೋರು ಅಂತ ಜನ ತಿಳಿದಿರ್ತಾರೆ. ಜನ ಏನು, ನಾವೇ ಅಂದ್‌ಕೊಂಡಿರ್ತೀವಿ! ನೆನಪಿರಲಿ, ಜನ 'ನೀವೇ ನಮ್ಮ ಪಾಲಿನ ದೇವರು' ಎಂದು ಬಿಡುತ್ತಾರೆ. ಬಟ್, ನಾವು ಕೇರ್‌ಫುಲ್ ಆಗಿರಬೇಕು. ಇವತ್ತು ಸತ್ತ ಮೂವರು ಯಾಕೆ ಸತ್ತರು ಅಂತ ನಮಗೆ ಪೂರ್ತಿ ಗೊತ್ತಾಗೋ ಸಾಧ್ಯತೆ ಇಲ್ಲ. ಉಳಿದ ಹದಿನೇಳು ಮಂದಿಗೆ ಕೆಲಸ ಮಾಡಿದ ಔಷಧಿ ಈ ಮೂವರಿಗೆ ಯಾಕೆ ಕೆಲ್ಸ ಮಾಡಲಿಲ್ಲ? ಅದೇ ಮಿಸ್ಟರಿ. ಮನುಷ್ಯ ಶರೀರ ಇನ್ನೂ ನಮಗೆ ಅರ್ಥವಾಗಿಲ್ಲ. ಅರ್ಥವಾಗೋದೂ ಇಲ್ಲ. ಪ್ರಕೃತಿ ನಮಗಿಂತ ಯಾವಾಗಲೂ ಎರಡು ಹೆಜ್ಜೆ ಮುಂದೆ ಇರುತ್ತೆ. ನಾವು ಅದರ ಹಿಂದೆ ಹೆಜ್ಜೆ ಹಾಕುತ್ತಾ ಹೋಗಬೇಕು. ನಾವು ಎಷ್ಟು ತಗ್ಗಿಬಗ್ಗಿ ಹೋಗ್ತೀವೋ ಅಷ್ಟು ಸೇಫ್ ಆಗಿರ್ತೀವಿ. ಯಾವಾಗಲೂ ನೆನಪಿಡು. ಇದು ದೇವರಿಲ್ಲದ ಬದುಕು." ತಮಗೆ ತಾವೆ ಮಾತಾಡಿಕೊಂಡಂತಿದ್ದ ಷರೀಫ್ ಮೇಷ್ಟ್ರ ಮಾತುಗಳು ಪ್ರತಿ ಬಾರಿಯೂ ಹೊಸ ಅರ್ಥವನ್ನೇ ನೀಡುತ್ತಿದ್ದವು. ಮೇಷ್ಟ್ರು ಜೀವನ ಪೂರ್ತಿ ಮೇಷ್ಟ್ರಾಗೇ ಉಳಿಯೋದು ಹೀಗೆ. ಅವರು ಯಾವಾಗಲು ಹೇಳುತ್ತಿದ್ದ ಕವಿ ಎಸ್. ಮಂಜುನಾಥರ ಪದ್ಯವೊಂದಿತ್ತು. 'ಕವಿ–ಪಾಡು' ಅನ್ನೋ ಹೆಸರಿನದು. "ರಾಘವ, ಇದರಲ್ಲಿ ಬರುವ ಕವಿ ಪದದ ಜಾಗದಲ್ಲಿ ವೈದ್ಯ ಎಂದು ಹೇಳಿಕೋ, ನಿನ್ನ ವೃತ್ತಿ ಬದುಕು ನಿನಗೆ ಅರ್ಥವಾಗುತ್ತದೆ" ಎನ್ನುತ್ತಿದ್ದರು ಅವರು.

"ಕಲ್ಲಾದ ಕವಿಯ ಹೃದಯದೊಲೆಯೊಳಗೆ
ಎಷ್ಟೇ ಉರಿ ಉರಿದರು ಆವಿಯಾಗದೇ ಉಳಿದ
ಒಂದು ಹನಿ ಕಂಬನಿ
ಪಾಪ ಅವರಿಗೇನು ಗೊತ್ತು
ಕವಿಗಷ್ಟೇ ಗೊತ್ತು"

ಅಂದು ಷರೀಫರಿಗೆ ತುಂಬಾ ನೋವಾಗಿತ್ತು. ಮೂರು ಜನರ ಸಾವಿಗೆ ಅವರೇ ಕಾರಣ ಅಂತ